# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1310 (1460) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 17.03.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರಾವಳಿ ಭಾಗದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಹೂಡಿಕೆದಾರರ ಬೇಡಿಕೆ ಇದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಸರ್ಕಾರದ ಮುಂದೆ ಇರುವ ತೊಂದರೆಗಳೇನು; | ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರವು ನೂತನ ಕೈಗಾರಿಕಾ ನೀತಿ 2025-30 ನ್ನು ಜಾರಿಗೆ ತಂದಿರುತ್ತದೆ. ಕರಾವಳಿ ಭಾಗದ ತಾಲ್ಲೂಕುಗಳನ್ನು ಕೈಗಾರಿಕಾ ಅಭಿವೃದ್ಧಿ ಅನುಸಾರ ವಲಯ-1 ಹಾಗೂ ವಲಯ-2 ರಲ್ಲಿ ವರ್ಗೀಕರಿಸಿ, ಹೆಚ್ಚಿನ ಪ್ರೋತ್ಸಾಹ ಹಾಗೂ ಉತೇಜನಗಳನ್ನು ನೀಡಲಾಗುತ್ತಿದೆ. |
| ಆ | 2025-26 ರಲ್ಲಿ ನಡೆದ ಉದ್ದಿಮೆದಾರರ ಹೂಡಿಕೆ ಸಮಾವೇಶದಲ್ಲಿ ಕರಾವಳಿ ಭಾಗಕ್ಕೆ ಯಾವುದೇ ಹೆಚ್ಚಿನ ಉದ್ದಿಮೆದಾರರು ಹೂಡಿಕೆ ಮಾಡಲು ಇಚ್ಛಿಸದೇ ಇರಲು ಕಾರಣವೇನು; | ಕರಾವಳಿ ಭಾಗಕ್ಕೆ ಸಂಬಂಧಿಸಿದಂತೆ 2025 ರ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ 04 ಕೈಗಾರಿಕೆಗಳೊಂದಿಗೆ MOU ಮಾಡಿಕೊಳ್ಳಲಾಗಿದ್ದು, ರೂ.4,000/- ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 3,780 ಜನರಿಗೆ ಉದ್ಯೋಗ ಸೃಜನೆಯಾಗಲಿದೆ. |
| ಇ | ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಅತ್ಯಂತ ಹೆಚ್ಚಿನ ಅವಕಾಶ ಇರುವ ಹಾಗೂ ಮೂಲಭೂತ ಸೌಕರ್ಯ ಇರುವ ಕರಾವಳಿ ಭಾಗಕ್ಕೆ ಉದ್ದಿಮೆದಾರರ ಜೊತೆಗೆ ಉದ್ಯೋಗವಕಾಶ ಒದಗಿಸಿಕೊಡಲು ಸರ್ಕಾರ ಸಮಗ್ರ ವರದಿ ತಯಾರಿಸಿ ಕ್ರಮ ಕೈಗೊಳ್ಳುವುದೇ; | ನೂತನ ಕೈಗಾರಿಕಾ ನೀತಿ 2025-30 ನ್ನು ಜಾರಿಗೆ ತರಲಾಗಿದ್ದು, ಎಲ್ಲಾ ಹೊಸ ಕೈಗಾರಿಕಾ ಹೂಡಿಕೆ ಯೋಜನೆಗಳು ಸಾಧ್ಯವಾದಷ್ಟು ಅತಿ ಹೆಚ್ಚು ನೇರ ಉದ್ಯೋಗಾವಕಾಶಗಳನ್ನು ಸೃಜಿಸಬೇಕು. ಈ ಕೈಗಾರಿಕೆಗಳಲ್ಲಿ ಒಟ್ಟು ಕನಿಷ್ಠ 70% (ಒಟ್ಟು ಆಧರಿಸಿ) ಉದ್ಯೋಗಾವಕಾಶ ಕನ್ನಡಿಗರಿಗೆ ಇರಬೇಕು ಹಾಗೂ ಗ್ರೂಪ್-ಡಿ ಉದ್ಯೋಗಗಳು 100% ಕನ್ನಡಿಗರಿಗೆ ನೀಡಬೇಕಾಗಿರುತ್ತದೆ. ಇದರಿಂದ, ಸ್ಥಳೀಯವಾಗಿ ಉದ್ಯೋಗ ಸೃಜನೆಯಾಗುತ್ತದೆ. |
| ಈ | ಈಗಾಗಲೇ ಸ್ಥಾಪನೆಗೊಂಡ ಬೃಹತ್ ಉದ್ದಿಮೆಗಳ ಮತ್ತು ಅವರು ವಶಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲು ಮತ್ತು ಉದ್ಯೋಗ ನೀಡದೇ ಸ್ಥಳೀಯರಿಗೆ ವಂಚನೆ ಮಾಡಿದ್ದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು); | ಕನ್ನಡಿಗರಿಗೆ ಉದ್ಯೋಗ ನೀಡುವುದು ಮತ್ತು ಅನುಪಾಲನೆಯ ಕುರಿತು ಜಿಲ್ಲಾ ಕೈಗಾರಿಕಾ ಕೇಂದ್ರಗಳು ನಿಗಾ ಇಡಲಿವೆ. ಕನ್ನಡಿಗರಿಗೆ ನಿಗಧಿ ಮಾಡಿದಂತೆ ಉದ್ಯೋಗ ನೀಡುವುದಕ್ಕೆ ವಿಫಲವಾದಲ್ಲಿ ಸಂಬಂಧಿಸಿದ ಜಿಲ್ಲಾ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ, ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಹಾಗೂ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗಳ ಗಮನಕ್ಕೆ ತರಬೇಕಾಗುತ್ತದೆ. ಘಟಕಕ್ಕೆ ನೀಡಲಾದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮರಳಿ ವಸೂಲಾತಿ ಮಾಡಲು ಇವುಗಳು ಶಿಫಾರಸ್ಸು ಮಾಡಬಹುದಾಗಿದೆ. |

<table>
<tr>
<td>ಉ</td>
<td>ಕರಾವಳಿ ಭಾಗದ 3 ಜಿಲ್ಲೆಗಳಲ್ಲಿ ಪ್ರಸ್ತುತ ಸ್ಥಾಪಿಸಲು ಉದ್ದೇಶಿಸಿರುವ ಖಾಸಗಿ ಮತ್ತು ಸರ್ಕಾರಿ ಉದ್ದಿಮೆಗಳಾವುವು? (ವಿವರ ನೀಡುವುದು)</td>
<td>ಕರಾವಳಿ ಭಾಗದ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ 2 ವರ್ಷಗಳಿಂದ ಪ್ರಸ್ತುತದವರೆಗೆ (2023-24 ರಿಂದ 2026 ನೇ ಫೆಬ್ರುವರಿ ಅಂತ್ಯದವರೆಗೆ) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 08 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರೂ.344.67 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮತ್ತು 1030 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ. ಅನುಮೋದನೆಯಾದ ಎಲ್ಲಾ ಯೋಜನೆಗಳು ಅನುಷ್ಠಾನದ ವಿವಿಧ ಹಂತಗಳಲ್ಲಿವೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ:
<table>
<tr><th rowspan="2">ಜಿಲ್ಲೆ</th><th colspan="3">ಅನುಮೋದನೆಯಾದ ಯೋಜನೆಗಳು</th><th colspan="3">ಅನುಷ್ಠಾನ ಹಂತದಲ್ಲಿರುವ ಯೋಜನೆಗಳು</th></tr>
<tr><th>ಸಂಖ್ಯೆ</th><th>ಮೊತ್ತ (ಕೋ.ರೂ)</th><th>ಉದ್ಯೋಗವಕಾಶ</th><th>ಸಂಖ್ಯೆ</th><th>ಮೊತ್ತ (ಕೋ.ರೂ)</th><th>ಉದ್ಯೋಗವಕಾಶ</th></tr>
<tr><td>ದ.ಕನ್ನಡ</td><td>6</td><td>273.57</td><td>750</td><td>6</td><td>273.57</td><td>750</td></tr>
<tr><td>ಉಡುಪಿ</td><td>2</td><td>71.1</td><td>280</td><td>2</td><td>71.1</td><td>280</td></tr>
</table>
</td>
</tr>
</table>

**ಸಿಐ 62 ಎಸ್‌ಪಿಐ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು